# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ. 20/2018**

**ಸಿ.ಡಬ್ಲೂ-1 ಪಿ.ಡಬ್ಲೂ -1**

ದಿಃ **28.08.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಅಮ್ಮಣ್ಣಮ್ಮ |
| ಗಂಡ/ತಂದೆಯ ಹೆಸರು | ಲೇಟ್ ಗಣೇಶ |
| ವಯಸ್ಸು | ಸುಮಾರು **60** ವರ್ಷ |
| ಕೆಲಸ | ಗೃಹಿಣಿ |
| ವಾಸಸ್ಥಳ | ಈರತಯ್ಯನಕೊಪ್ಪಲು ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಮ್ಮ ಮನೆಯ ಪಕ್ಕದಲ್ಲಿ 1ನೇ ಆರೋಪಿ ಮನೆ ಇದೆ. ಆರೋಪಿ ನಮ್ಮ ಮನೆಯ ಪಕ್ಕದಲ್ಲಿ ಒಂದು ತೆಂಗಿನ ಮರವನ್ನು ನೆಟ್ಟಿದ್ದು, ಅದರ ಗರಿ ನಮ್ಮ ಮನೆಯ ಮೇಲೆ ಬೀಳುತ್ತಿದ್ದು, ಅದನ್ನು ಕಡಿದು ಹಾಕುವಂತೆ ಕೇಳಿದ್ದಕ್ಕೆ, ಆರೋಪಿತರು ಗಲಾಟೆ ಮಾಡುತ್ತಿದ್ದರು.

ಸುಮಾರು ಐದೂವರೆ ವರ್ಷಗಳ ಹಿಂದೆ ಬೆಳಿಗ್ಗೆ 6.30 ಗಂಟೆಗೆ ನಮಗೆ ಸೇರಿದ ಹಸು ಕಸ ಕಿತ್ತು ಕೊಂಡು ಹೋಗಿ, 1ನೇ ಆರೋಪಿಯ ಹೊಲದ ಅವರೆ ಬೆಳೆಯನ್ನು ಮೇಯ್ದಿತ್ತು. ಸದರಿ ವಿಚಾರವಾಗಿ 2ನೇ ಆರೋಪಿ ಹಾದರಗಿತ್ತಿ ಮುಂಡೆ, ಸಣ್ಣ ಮುಂಡೆ ಎಂದು ಅವಾಚ್ಯವಾಗಿ ಬೈದರು. 2 ನೇ ಆರೋಪಿ ನನ್ನ ತಲೆಯ ಮುಂದೆಲೆ ಹಿಡಿದುಕೊಂಡು ಕೆಳಗೆ ಬೀಳಿಸಿದರು. 1ನೇ ಆರೋಪಿ ದೊಣ್ಣೆಯಿಂದ ದೊಣ್ಣೆಯಿಂದ ನನ್ನ ಬಲರೆಟ್ಟೆ ಹಾಗೂ ಬೆನ್ನಿಗೆ ಹೊಡೆದು ನನಗೆ ಅವಮಾನ ಮಾಡಿದ. ಆರೋಪಿತರು ನನ್ನನ್ನು ಹೊಡೆದು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ಗಲಾಟೆಯನ್ನು ಚಾಸಾ-4 ರವರು ಬಿಡಿಸಿರುತ್ತಾರೆ. ಗಲಾಟೆಯಾದ ನಂತರ ಠಾಣೆಗೆ ಹೋಗಿರುತ್ತೇವೆ. ಸಾಕ್ಷಿ ಮುಂದುವರೆದು ಗಲಾಟೆಯಾದ ನಂತರ ನಾನು ಮನೆಯಲ್ಲಿದ್ದು, ಊರಿನ ಗ್ರಾಮಕ್ಕೆ ನ್ಯಾಯಕ್ಕೆ ಕೊಟ್ಟಿದ್ದೇವು. ಆರೋಪಿತರು ಪದೇ ಪದೇ ಗಲಾಟೆ ಮಾಡುತ್ತಿದ್ದರಿಂದ, ಗಲಾಟೆಯಾದ ಒಂದು ದಿನ ಬಿಟ್ಟು

ಮಾರನೇ ದಿನ ದೂರು ಕೊಟ್ಟೆ, ಸಾಕ್ಷಿಗೆ ಗಣಕೀಕೃತ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ಕೊಟ್ಟ ಮಾರನೇ ದಿನ ಪೊಲೀಸರು ನಮ್ಮ ಮನೆಯ ಬಳಿ ಬಂದಿದ್ದು, ಅಲ್ಲಿ ನಾನು ಹಾಜರಿದ್ದು, ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಬೆಳಿಗ್ಗೆ 10.00 ರಿಂದ 10.30 ರವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಮಹಜರ್ ಕ್ರಮ ಕೈಗೊಂಡು, ಸ್ಥಳದಿಂದ ದೊಣ್ಣೆಯನ್ನು ಅಮಾನತು ಪಡಿಸಿಕೊಂಡರು. ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ನಾನು ನ್ಯಾಯಾಲಯಕ್ಕೆ ಬಂದು ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ದ.ಪ್ರ.ಸಂ 164 ರ ಹೇಳಿಕೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನನ್ನ ಮೇಲೆ ಹಲ್ಲೆ ಮಾಡಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಸ.ಸ.ಅ ರವರು ದೊಣ್ಣೆಯನ್ನು ಹಾಜರುಪಡಿಸಲು ಕಾಲಾವಕಾಶ ಕೋರಿದ್ದರಿಂದ ಮುಂದಿನ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸರಿ ಇದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ಹುಣಸೂರು.**